774

ಮೈಸೂರು ಗಜೆಟ್ಟು.

ನಂ. 45 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ್ 1890.

ಬೆಂಗಳೂರು, ಶನಿವಾರ, ನವೆಂಬರ್ ತಾ|| 15, ಸನ್ 1890.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟ್ರು ಇನ್‌ಸ್ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ಷ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟ್ರು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸುಗಳು.

3ನೇ ಭಾಗ–ಶ್ರೀಮ್ಮ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಸುಗಳು ವ ರೆಗ್ಯುಲೇಷನ್‌ಗಳು—ಯಿಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಯಿಲ್ಲ.

೧ನೇ ಭಾಗ.

ಶ್ರೀಮ್ಮ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 13ನೇ ಅಕ್ಟೋಬರ್ 1890.

ನಂ. 418.—ಸರ್ಕಾರೀ ಕಾಗದಪತ್ರಗಳನ್ನು ಪೋಸ್ಟಾಫೀಸ್ ಮೂಲಕವಾಗಿ ಬಗರ್ ಹಾಸಲ್ ರವಾನಿಸುವ ಬಗ್ಗೆ ಅರ್ಥರುದ ತಮ್ಮಾಂ ಸರ್ಕಾರ ಉದ್ಯೋಗಸ್ಥರೂ, ಸರ್ಕಾರೀ ಲಬೋಟರಿಗಳ [ಮೇಲೆ ಸ್ಕೆ ಮಾಡುವ ವಿಷಯದಲ್ಲಿರುವ ನಿಬಂಧನೆಗಳಿಗೆ ಜಾಗರೂಕತೆಯಿಂದ ಸಂಪೂರ್ಣವಾದ ನಿಗೆ ಕೊಡುವದು ಅವಶ್ಯಕವಾಗಿರುತ್ತೆ; ಮತ್ತು ಇದರಿಂದ ಕಂಡ ಸಂಗತಿಗಳಲ್ಲಿ ಆಕ್ರಮಗಳು ವಿಶೇಷವಾಗಿರುತ್ತೆಂದು ಗವರ್ಮೆಂಟಿನವರ ಜಾಹಿರಾತಿಗೆ ಬಂದಿರುವದ್ದರಿಂದ ಈ ವಿಷಯದಲ್ಲಿ ಮುಖ್ಯವಾಗಿ ನಿಗೇ ಕೊಡತಕ್ಕದ್ದು:—

(1) ರವಾನೆ ಮಾಡುವ ಆಫೀಸರುಗಳು ಇತರರಿ "ಗೋಸ್ತರ" ರುಜು ಮಾಡತಕ್ಕದ್ದಲ್ಲವು; ಅವರ ನ್ಯಾಯವಾದ ಸರ್ಕಾರ ಹುದ್ದೆಯ ಹೆಸರು ಪ್ರತಿ ಸಂದರ್ಭದಲ್ಲಿಯೂ ನಮೂದ್ ಮಾಡಲ್ಪಡಬೇಕು.

(2) ರವಾನೆ ಮಾಡುವ ಆಫೀಸರರ ಹುದ್ದೆಯು ಯಾವ ಸಂದರ್ಭದಲ್ಲಿಯೂ ಬಿಡಲ್ಪಡಕೂಡದು, ಯಾ ನ್ಯೂನವಾಗಿರಕೂಡದು; ಪ್ರತಿ ಸಂಗತಿಯಲ್ಲಿಯೂ ಅದು ಪೂರ್ತಿಯಾಗಿರತಕ್ಕದ್ದು.

(3) ಮೈಸೂರು ಸರ್ಕಾರ್ ಕೆಲಸದ ಮೇಲೆ ರವಾನಿಸಲ್ಪಡುವ ಸರ್ಕಾರೀ ಲಿಫಾಪೆಗಳ ಮೇಲೆ "ಮೈಸೂರು ಸರ್ಕಾರ" ಯಂಬದಾಗಿ ಬರೆಯಲ್ಪಡಬೇಕಲ್ಲದೆ "ಸರ್ಕಾರೀ" ಯಂದು ವಂದೇ ಶಬ್ದ ಬರಿಯುವದು ಪೂರ್ತೀ ಅಲ್ಲವು.

(4) ಲಿಫಾಪೆಗಳ ಯಡಭಾಗದ ಕೆಳಗಿನ ಮೂಲೆಯಲ್ಲಿ ಸ್ಯೆ ಮಾಡಬೇಕು, ಮತ್ತೆಲ್ಲಿಯಾದರೂ ಸ್ಯೆ ಮಾಡುವದು ಅಕ್ರಮ

2. ಈ ವಿಷಯಗಳಲ್ಲಿ ಮೇಲ್ಕಂಡ ನಿಬಂಧನೆಯನ್ನು ತಪ್ಪಿ ನಡೆದರೆ, ಸದರೀ ಲಕೋಟೆಗಳು, ಇಂಡ್ಯ್ಯ ಪೋಸ್ಟಲ್ ಗೈಡ್ 375ನೇ ಕ್ಯಾಜ್ ರೀತ್ಯಾ ಸಾಧಾರಣವಾದ ನಟ್‌ಪೇಡ್ ದರಗಳನುಸರಿಸಿ ಹಾಸಲಿಗೆ ಗುರಿಮಾಡಲ್ಪಡುತ್ತೆ. ಹಾಂಗೆ ಗುರಿಮಾಡಲ್ಪಟ್ಟಾಗ ಅವುಗಳಿಗಾಗಿ ತೆರಬೇಕಾದ ಹಾಸಲು, ತಪ್ಪಿ ನಡೆದ ನವಕರ್‌ಫಿಂದ ವಸೂಲ್ಮಾಡಲ್ಪಡಬೇಕಾಗುವದು.

ತಾರೀಖು 31ನೆ ಅಕ್ಟೋಬರ್ 1890.

ನಂ. 304.—ಹರ್ಹಸೂರ್ ತಾಲ್ಲೂಕು ಅಮಲ್ದಾರ್ ಟಿ. ಎಸ್. ವಿಾರ್ ಕವಾಲುರ್ದ್ದಿ ಅಲ್ಲೀಖಾರ್ಖಾಯುವರಿಗೆ, 1890ನೇ ಇಸವಿ ಸೆಪ್ಟಂಬರ್ 3ನೇ ಮುಕ್ಕಂ 219ನೇ ನಂಬರ್ ಇಸ್ತಿಹಾರ್ ನಾಮೆಯಿಂದ ಕೊಡಲ್ಪಟ್ಟ 20 ದಿವಸಗಳ ಪ್ರಿವಿಲೀಜ್ ರಜಾದಿಂದ ಸದರೀ ಯವರು 1890ನೇ ಇಸವಿ ಸೆಪ್ಟಂಬರ್ 20ನೇ ಮುಕ್ತಮಿನಲ್ಲಿ ಕೆಲಸದ ಮೇಲೆ ಹಾಜರಾಗಿರುತ್ತಾರಾಗಿ ರಜಾದ ಪೈಕಿ ಉಪಯೋಗಿಸಲ್ಪಡದ ಭಾಗವಂದರೆ 2 ದಿವಸಗಳು ಯಿದರಿಂದ ರದ್ದು ಮಾಡಲ್ಪಟ್ಟಿರುತ್ತವೆ.

ತಾರೀಖು 4ನೇ ನವೆಂಬರ್ 1890.

ನಂ. 306.—ಫರ್ಸ್ಟ್‌ಕ್ಲಾಸ್ ಸಬ್ ಡಿವಿಜ್ ಪೊಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಮಿಸ್ಟರ್ ಗೋಪಾಲಯ್ಯಂಗಾರ್ರಿಗೆ 1889ನೇ ಇಸವಿ ಫೆಬ್ರವರೀ 5ನೇ ಮುಕ್ತಂ 7140—71—200ನೇ ನಂಬರ್ ಪ್ರೊಸೀಡಿಂಗ್ಸಿನ ನಿಯಮಗಳನುಸರಿಸಿ 4 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ರೂಲ್.

ಮೈಸೂರು ಗೆಜೆಟ್ಟಿಗೆ ಚಂದಾ ಹಣವನ್ನು ಪಾವತಿಮಾಡತಕ್ಕ ವಿಷಯದಲ್ಲಿ ಹಾಲಿ ಜಾರೀ ಯಿರುವ ನಡವಳಿತವನ್ನ ರದ್ದು ಮಾಡಿ ಇದರಡಿ ಬರುವ ನಿಬಂಧನೆಯನ್ನು ವಿಧಿಸೋಣಾಗಿರುತ್ತೆ.

ಯಿಚ್ಛೈವುಳ್ಳ ಚಂದಾದಾರರು, ಅವರ ಚಂದಾ ಮೊಬಲಗನ್ನು ಅತ್ಯಂತ ಸಮೀಪವಾದ ತಾಲ್ಲೂಕು ಖಜಾನೆಗೆ ಪಾವತಿ ಮಾಡಬೇಕು.

ಅಮಲ್ದಾರರು ಹಾಂಗೆ ಪಾವತಿ ಮಾಡೋಣಾದ ಮೊಬಲಗಿಗೆ, ಟ್ರೆಜರಿಗೆ ಬಂದ ಮೊಬಲಗಿಗಾಗಿ ಕೊಡುವ ವಾಡಿಕೆಯಾದ ಅಚ್ಚಿನ ನಮೂನೆಯಲ್ಲಿ ದ್ವಿಪ್ರತಿ ರೀತಿಯನ್ನ ತಯಾರ್ಮಾಡಿ ಕೊಡತಕ್ಕದ್ದು.

ಚಂದಾದಾರನು ಡ್ಯೂಪ್ಲಿಕೇಟ್ ರೀತಿಯನ್ನು ತನ್ನಲ್ಲಿ ಯಿಟ್ಟುಕೊಂಡು, ಒರಿಜಿನಲ್ ರೀತಿಯನ್ನು ತನ್ನ ದರಖಾಸ್ತಿನ ಸಂಗಡ ಮೈಸೂರು ಗೆಜೆಟ್ ಕಂಸೈಲರವರಿಗೆ ಕಳುಹಿಸತಕ್ಕದ್ದು.

ಕಂಸೈಲರವರು ಟ್ರೆಜರೀ ರೀತಿಯನ್ನು ಹಣಬಂದಂತೆ ಒಪ್ಪಿಕೊಳ್ಳುವರು.

ತಾರೀಖು 21ನೇ ಡಿಸಂಬರ್ 1888.

ಕಾರ್ಯಾರ್ಥ ದಿವಾನರವರನ್ನು ಭೇಟಿ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡಮನುಷ್ಯರು ಶುಕ್ರವಾರಗಳಲ್ಲಿ ಮಧ್ಯಾನ್ಹಾತ್ಪರ 2 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಯಾಗಿ ಹಿಂದಿನ ದಿನ ಚೀಫ್ ಸೆಕ್ರಟೆರಿಯವರಿಗೆ ತಮ್ಮ ಕಾರ್ಡಗಳನ್ನು ಕಳುಹಿಸತಕ್ಕದ್ದು.

2. ಬೆಂಗಳೂರು ಆಫಿಸಿನಲ್ಲಿ ಯಿಡಲ್ಪಟ್ಟಿರುವ ಅರ್ಜೀಪೆಟ್ಟಿಗೆಯು ದಿನವಹೀ ಚೀಫ್ ಸೆಕ್ರಟೆರಿಯವರಿಂದಲೂ, ಅವರು ಬೆಂಗಳೂರಲ್ಲಿ ಯಿಲ್ಲದ ಕಾಲದಲ್ಲಿ ಅಂಡರ್ ಸೆಕ್ರಟೆರಿಯವರಿಂದಲೂ ಮಧ್ಯಾನ್ಹ 12 ಘಂಟೆಗೆ ತೆಗಿಯಲ್ಪಟ್ಟು ಅದರಲ್ಲಿನ ಅರ್ಜಿಗಳು ತೆಗದುಕೊಳ್ಳಲ್ಪಡುವವು.

3. ಅರ್ಜೀದಾರರುಗಳು ಶುಕ್ರವಾರ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಹುಕುಂ ಬನೋಜೀಬ್,
ಟಿ. ಆನಂದರಾವ್,
ಚೀಫ್ ಸೆಕ್ರಟೆರಿ.